ನೋಂದಣಿ ಸಂಖ್ಯೆ: 1556/2010-11

# ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ (ರಿ) ಬೆಂಗಳೂರು

(ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ)

ನಂ.26, 4ನೇ ಮುಖ್ಯರಸ್ತೆ, 7ನೆ ಅಡ್ಡರಸ್ತೆ, ಎಂ.ಇ.ಐ ಬಡಾವಣೆ,
ನಾಗಸಂದ್ರ ಅಂಚೆ, ಟಿ.ದಾಸರಹಳ್ಳಿ, ಬೆಂಗಳೂರು

# ಆಹ್ವಾನ ಪತ್ರಿಕೆ

## 10ನೇ ವಾರ್ಷಿಕ ಸರ್ವ ಸದಸ್ಯರ ಸಭೆ : 2024-25

**ದಿನಾಂಕ:** 10 -11-2024 ಭಾನುವಾರ,
**ಸಮಯ:** ಮಧ್ಯಾಹ್ನ 1:30 ಗಂಟೆಗೆ

**ಸ್ಥಳ :**

ಎಸ್.ಎಸ್.ಆರ್.ಜಿ, ಮಹಿಳಾ ಪದವಿ ಕಾಲೇಜು ಸಭಾಂಗಣ
ರೈಲ್ವೆ ಸ್ಟೇಷನ್ ರಸ್ತೆ, ರಾಯಚೂರು

**ತೆರೆದ ಅಂಚೆ**

ಶ್ರೀಮತಿ/ಶ್ರೀ ______________________________

______________________________

______________________________

______________________________

# ಆಹ್ವಾನ ಪತ್ರಿಕೆ

## ಸನ್ಮಾನ್ಯ ಸದಸ್ಯರೇ,

ತಮ್ಮೆಲ್ಲರ ಅಭೂತಪೂರ್ವ ಸಹಕಾರದಿಂದಾಗಿ ಸಂಘವು ತನ್ನ ಹತ್ತನೇ ಸರ್ವ ಸದಸ್ಯರ ಸಭೆಯನ್ನು ಕರೆಯುವಂತಾಗಿರುವುದಕ್ಕೆ ತಮಗೆಲ್ಲರಿಗೂ ಅಭಿನಂದನೆಗಳು.

ಬೆಂಗಳೂರಿನ ಶಾಸಕರ ಭವನ ಸಭಾಂಗಣದಲ್ಲಿ ದಿನಾಂಕ 28.07.2024ರಲ್ಲಿ ನಡೆದ ಕಾರ್ಯಕಾರಿ ಸಮಿತಿಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಸಾಮಾನ್ಯ ಸರ್ವಸದಸ್ಯರ ಸಭೆಯನ್ನು ರಾಯಚೂರು ನಗರದಲ್ಲಿ ನಡೆಸಲು ತಿರ್ಮಾನಿಸಲಾಯಿತು.

ತಮ್ಮಗೆಲ್ಲರಿಗೂ ತಿಳಿದಿರುವಂತೆ ಈ ಹಿಂದಿನ ಸರ್ಕಾರ ರಾಜ್ಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತರುವುದಾಗಿ ಘೋಷಿಸಿತ್ತು. ಆ ಸಂದರ್ಭದಲ್ಲಿ ಪದವಿ ಪೂರ್ವಶಿಕ್ಷಣ ಇಲಾಖೆಯ ಆಸ್ಮಿತೆಗೆ ಸಂಚಕಾರ ಬಂದಿತ್ತು. ನಂತರದಲ್ಲಿ ಬಂದ ಈಗಿರುವ ಸರ್ಕಾರ ರಾಜ್ಯಶಿಕ್ಷಣ ನೀತಿಯನ್ನು ಜಾರಿಗೆ ತರುವುದಾಗಿ ಘೋಷಿಸಿ, ಆ ನಿಟ್ಟಿನಲ್ಲಿ ಪ್ರೊ॥ ಸುಖದೇವ್ ಥೋರಟ್‌ರವರ ನೇತೃತ್ವದಲ್ಲಿ ರಾಜ್ಯ ಶಿಕ್ಷಣ ನೀತಿಯನ್ನು ಸಮಗ್ರವಾಗಿ ಜಾರಿಗೆ ತರಲು ಸಮಿತಿಯನ್ನು ರಚಿಸಿದೆ. ಈ ಸಮಿತಿಯ ಮುಂದೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಭವಿಷ್ಯದ ಸ್ಥಿತಿಗತಿಗಳ ಬಗ್ಗೆ ಇಲಾಖೆಯ ಪ್ರತ್ಯೇಕ ಆಸ್ಥಿತ್ವ ಕಾಪಾಡುವುದರ ಜೊತೆಗೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರ ಸೇವಾ ಸ್ಥಿತಿಗತಿ, ಪದೋನ್ನತಿ, ವೃಂದ ನೇಮಕಾತಿ ನಿಯಾಮಗಳು ಇವುಗಳ ಬಗ್ಗೆ ಸುದೀರ್ಘವಾಗಿ ಸಮಲೋಚಿಸಿ ಒಂದು ನಿರ್ಣಯಕ್ಕೆ ಬರುವುದು. ಈ ಹಿಂದೆ ಪದವಿ ಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರ ಅಧೀನದಲ್ಲಿಯೇ ಪರೀಕ್ಷೆ ನಡೆಯುತ್ತಿದ್ದವು, ಅದರ ಹಿಂದಿನ ಸರ್ಕಾರದಲ್ಲಿ ಇದನ್ನೂ ಪ್ರತ್ಯೇಕಿಸಿ ಕರ್ನಾಟಕ ಶಾಲಾಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಎಂದು ಪ್ರತ್ಯೇಕ ಮಂಡಳಿಯನ್ನು ರಚಿಸಿ, ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪರೀಕ್ಷೆ – I, ಪರೀಕ್ಷೆ – II ಮತ್ತು ಪರೀಕ್ಷೆ – III ಎಂದು ವರ್ಷದಲ್ಲಿ ಮೂರು ಪರೀಕ್ಷೆಗಳನ್ನು ನಡೆಸುತ್ತಿರುವುದರ ಸಾಧಕ ಬಾಧಕಗಳನ್ನು ಚರ್ಚಿಸಬೇಕಾಗಿರುವುದರಿಂದ ತಾವೆಲ್ಲರೂ, ಭಾಗವಹಿಸುತ್ತೀರೆಂದು ಆಶಿಸುತ್ತೇವೆ.

# <u>ಸಭೆಯ ಕಾರ್ಯಸೂಚಿ</u>

01 . ವಾರ್ಷಿಕ ಲೆಕ್ಕಪತ್ರ ಮಂಡನೆ ಮತ್ತು ಅನುಮೋದನೆ.

02. ಸಂಘಟನೆಯ ದೃಷ್ಠಿಯಿಂದ ಮುಖ್ಯ ವಿಷಯಗಳ ಚರ್ಚಿಸುವುದು.

03. ಸಂಘದ ಬೈಲಾವನ್ನು ತಿದ್ದುಪಡಿ ಮಾಡುವ ಬಗ್ಗೆ

04. ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

ತಮ್ಮ ನಂಬುಗೆಯ
ಅಧ್ಯಕ್ಷರು
ಮತ್ತು ಪದಾಧಿಕಾರಿಗಳು

# ವಾರ್ಷಿಕ ವರದಿ

ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ನ್ಯಾಯಯುತವಾದ ಬೇಡಿಕೆಗಳ ಈಡೇರಿಕೆಗಾಗಿ ಹಾಗೂ ಸೇವಾಸ್ಥಿತಿಗತಿಗಳನ್ನು ಸುಧಾರಿಸುವ ನಿಟ್ಟಿನಲ್ಲಿ ಹಲವಾರು ವರ್ಷಗಳಿಂದ ಅನೇಕ ಪದವಿಪೂರ್ವ ಕಾಲೇಜುಗಳ ಸಂಘಟನೆಗಳು ಹೋರಾಟ ನಡೆಸಿರುವುದು ತಮ್ಮೆಲ್ಲರಿಗೂ ತಿಳಿದ ಸಂಗತಿಯಾಗಿರುತ್ತದೆ.

ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಪಡೆಯುವ ಕಾರಣಕ್ಕಾಗಿ 2011ನೇ ಇಸವಿಯಲ್ಲಿ ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘವನ್ನು ನೋಂದಣಿ ಮಾಡಿಸಲಾಯಿತು. ನಂತರ 2011ರ ದ್ವಿತೀಯ ಪಿ.ಯು.ಸಿ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯವನ್ನು ಬಹಿಷ್ಕರಿಸಿ ವೇತನ ತಾರತಮ್ಯ ಸರಿಪಡಿಸುವಂತೆ ಸಂಘವು ಪ್ರತಿಭಟನೆ ನಡೆಸಿದ ಪರಿಣಾಮವಾಗಿ ಅಂದಿನ ಸರ್ಕಾರ ಶ್ರೀ ಕುಮಾರನಾಯಕ್ ನೇತೃತ್ವದ ಸಮಿತಿ ರಚಿಸಿ ವರದಿ ಪಡೆಯಿತು. ವರದಿ ಜಾರಿಗಾಗಿ 2016ನೇ ಇಸವಿಯಲ್ಲಿ ನಡೆಸಿದ 18 ದಿನಗಳ ಹೋರಾಟದ ಪರಿಣಾಮವಾಗಿ ಉಪನ್ಯಾಸಕರಿಗೆ ಒಂದು ಹೆಚ್ಚುವರಿ ವಾರ್ಷಿಕ ವೇತನ ಬಡ್ತಿ ನೀಡಿ ಸರ್ಕಾರ ಆದೇಶ ಹೊರಡಿಸಿತು. ಮುಂದೆ ಎಕ್ಸ್‌ಗ್ರೇಷಿಯಾವನ್ನು ಮೂಲ ವೇತನಕ್ಕೆ ವಿಲೀನಗೊಳಿಸಿ ವೇತನ ಆಯೋಗದಲ್ಲಿ ಜಾರಿಗೆ ತರಲಾಯಿತು. ಅಧಿಕಾರಿಗಳ ತಪ್ಪು ನಡೆಯಿಂದಾಗಿ 1–8–2008ರ ನಂತರ ನೇಮಕಗೊಂಡ ಉಪನ್ಯಾಸಕರು ಒಂದು ವೇತನ ಬಡ್ತಿಯಿಂದ ವಂಚಿತರಾಗಬೇಕಾಯಿತು.

. ಸಂಘದ ನಿರಂತರ ಪ್ರಯತ್ನದಿಂದಾಗಿ ಆರ್ಥಿಕ ಇಲಾಖೆಯಿಂದ ಸ್ಪಷ್ಟಿಕರಣ ಪಡೆಯಲಾಗಿದ್ದು 2007–08ನೇ ಅದಿಸೂಚನೆ/ಜ್ಞಾಪನದನ್ವಯ ನೇಮಕವಾಗಿರುವ ಎಲ್ಲಾ ಉಪನ್ಯಾಸಕರಿಗೂ ದಿನಾಂಕ 01.04.2018 ರಿಂದ ಇಲ್ಲಿಯವರೆಗೂ ಪರಿಷ್ಕರಣೆ ಸೌಲಭ್ಯವು ಸಿಗಲಿದೆ.

ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರ ಕಾರ್ಯವನ್ನು

ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಅಪರ ಆಯುಕ್ತರು ಶಾಲಾ ಶಿಕ್ಷಣ ಇಲಾಖೆ ಇವರ ಮೇಲುಸ್ತುವಾರಿಗೆ ಒಳಪಡಿಸಿದ್ದರ ವಿರುದ್ಧ ಡಿಸೆಂಬರ್ 01, 2023ರಂದು ಬೆಂಗಳೂರಿನ ಸ್ವಾತ್ರಂತ್ಯ ಉದ್ಯಾನದಲ್ಲಿ ಬೃಹತ್ ಪ್ರತಿಭಟನೆಯನ್ನು ಸಂಘವು ನಡೆಸುವ ಮೂಲಕ ಸರ್ಕಾರದ ಗಮನವನ್ನು ಸೆಳೆಯಿತು.

ಅದೇ ರೀತಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಬದಲಿಸಿ ಕರ್ನಾಟಕ ರಾಜ್ಯ ಶಿಕ್ಷಣ ನೀತಿಯನ್ನು ಜಾರಿಗೆ ತರಲು ಸರ್ಕಾರವು ಪ್ರೊ॥ ಸುಖದೇವ್ ಥೋರಟ್ ಅವರ ನೇತೃತ್ವದಲ್ಲಿ ರಚಿಸಿರುವ ಸಮಿತಿಯ ಮುಂದೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಅಸ್ಮಿತೆಯನ್ನು ಉಳಿಸುವ ಸಂಬಂಧ ಚರ್ಚಿಸಲು ಪ್ರೊ ॥ ಬರಗೂರು ರಾಮಚಂದ್ರಪ್ಪ ಅವರ ನೇತೃತ್ವದಲ್ಲಿ ವಿವಿಧ ಶಿಕ್ಷಣ ತಜ್ಞರನ್ನು ಆಹ್ವಾನಿಸಿ ದುಂಡುಮೇಜಿನ ಸಭೆಯನ್ನು ದಿನಾಂಕ 24.01.2024ರಂದು ಸಚಿವಾಲಯ ಕ್ಲಬ್‌ನಲ್ಲಿ ಆಯೋಜಿಸಲಾಯಿತು.

ದಿನಾಂಕ : 03.10.2024ರಂದು ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ವತಿಯಿಂದ ಮಾನ್ಯ ಅಧ್ಯಕ್ಷರು, ಕರ್ನಾಟಕ ಶಾಲಾ ಪರೀಕ್ಷಾ ಮತ್ತು ಮೌಲ್ಯ ನಿರ್ಣಯ ಮಂಡಳಿ ಇವರನ್ನು ಭೇಟಿ ಮಾಡಿ, 2025ನೇ ಸಾಲಿನ ದ್ವಿತೀಯ ಪಿಯುಸಿ ಪ್ರಾಯೋಗಿಕ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಯಾದೃಚ್ಛೀಕರಿಸುವ ದಿನಾಂಕ 01.10.2024ರ ಸುತ್ತೋಲೆಯನ್ನು ಹಿಂಪಡೆಯುವಂತೆ ಮನವಿ ಮಾಡಲಾಯಿತು. ಸಂಘದ ಮನವಿಯನ್ನು ಪರಿಗಣಿಸಿ ಯಾದೃಚ್ಛೀಕರಿಸುವ ಸುತ್ತೋಲೆಯನ್ನು ಶಾಲಾ ಪರೀಕ್ಷಾ ಮತ್ತು ಮೌಲ್ಯ ನಿರ್ಣಯ ಮಂಡಳಿಯು ಹಿಂಪಡೆದ್ದಿದ್ದು ಸಂಘದ ಪ್ರಯತ್ನಕ್ಕೆ ಸಂದ ಜಯವಾಗಿದೆ.

ಸಂಘದ ಪ್ರಯತ್ನದಿಂದಾಗಿ 2014ರಲ್ಲಿ ಮಾಡಲಾದ ವೃಂದ ಮತ್ತು ನೇಮಕಾತಿ ತಿದ್ದುಪಡಿ ಅನ್ವಯ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಶೇ 25 ರಷ್ಟು ಪ್ರಾಂಶುಪಾಲರನ್ನು ನೇರ ನೇಮಕ ಮಾಡಲು ಅವಕಾಶ ನೀಡಲಾಗಿತ್ತು. ನೇಮಕಾತಿ ಪ್ರಕ್ರಿಯೆಯ ಪ್ರಶ್ನೆ ಪತ್ರಿಕೆಗಳ ಸ್ವರೂಪ ಬದಲಾಯಿಸುವಂತೆ ಸಂಘದ ನಿರಂತರ

ಪ್ರಯತ್ನದಿಂದಾಗಿ ಎಲ್ಲರಿಗೂ ಸಮಾನ ಅವಕಾಶಗಳೊಂದಿಗೆ ನೇರನೇಮಕಾತಿ ಪ್ರಕ್ರಿಯೆಯನ್ನು ರಾಜ್ಯ ಪತ್ರದಲ್ಲಿ ದಿನಾಂಕ 06.06.2024ರಲ್ಲಿ ಪ್ರಕಟಿಸಲಾಗಿದೆ. ಈಗ ಸರ್ಕಾರದಿಂದ Karnataka Examination Authority ನೇಮಕಾತಿ ನಡೆಸುಂತೆ ಕಾರ್ಯದರ್ಶಿಯವರು ಪತ್ರಬರೆದಿದ್ದಾರೆ.

2013ರಲ್ಲಿ ಬಿ.ಎಡ್ ಪದವಿ ಹೊಂದಿದ ಉಪನ್ಯಾಸಕರು ಬಿ.ಎಡ್ ಪದವಿ ತೆರಳಿದ ಅವಧಿಯನ್ನು ಉಪನ್ಯಾಸಕರ ಸಂಘ ಅಸಾಧಾರಣೆ ಎಂದು ಪರಿಗಣಿಸಿ ಎಂದು ದಿನಾಂಕ 09.08.2024ರಲ್ಲಿ ಸರ್ಕಾರಕ್ಕೆ ಮನವಿ ಮಾಡಲಾಗಿತ್ತು. ಇದು ಸರ್ಕಾರದಿಂದ ಅಧಿಕೃತ ಆದೇಶವಾಗಿರುವುದರಿಂದ ಈ ಸಮಸ್ಯೆ ಕೂಡ ತಾರ್ಕಿಕವಾಗಿ ಅಂತ್ಯವಾಗಿದೆ.

ಅಲ್ಲದೇ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರ 15 ವರ್ಷದ ಕಾಲಮಿತಿ ವೇತನ ಬಡ್ತಿ ವೇತನ ಶ್ರೇಣಿಗಳನ್ನು PU Eds ನಲ್ಲಿ ನಮೂದಿಸುವಂತೆ ಇಲಾಖೆಯ ನಿರ್ದೇಶಕರಲ್ಲಿ ಮನವಿ ಮಾಡಲಾಯಿತು. ಇದು ಕೂಡ ಯಶಸ್ಸಿನ ಹಂತದಲ್ಲಿದೆ.

ಹೀಗೆ ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘವು ಕಾಲಕಾಲಕ್ಕೆ ಉದ್ಭವಿಸುವ ಉಪನ್ಯಾಸಕರ ಸಮಸ್ಯೆಗಳನ್ನು ಉದ್ದೇಶಿಸಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಪರಿಹರಿಸುವಂತಹ ಪ್ರಾಮಾಣಿಕ ಪ್ರಯತ್ನವನ್ನು ಒಂದು ದಶಕಗಳಿಗೂ ಹೆಚ್ಚುಕಾಲದಿಂದ ನಡೆಸುತ್ತಾ ಬರುತ್ತಿದೆ. ಉಪನ್ಯಾಸಕರ ಹಿತಾಸಕ್ತಿ ಮತ್ತು ಶ್ರೇಯಸ್ಸಿಗಾಗಿ ಸದಾಸ್ಪಂದಿಸುತ್ತಾ ಅವರ ನೋವಿಗೆ ಧ್ವನಿಯಾಗಿರುತ್ತದೆ. ಆದ್ದರಿಂದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಸಮಸ್ತ ಉಪನ್ಯಾಸಕ ವರ್ಗವು ಸಂಘದ ಸದಸ್ಯತ್ವವನ್ನು ನವಿಕರಿಸುವ ಮೂಲಕ ಸಂಘದ ಸಕ್ರಿಯ ಸದಸ್ಯರಾಗಿ ಹೆಚ್ಚಿನ ಶಕ್ತಿಯನ್ನು ತುಂಬ ಬೇಕು ಇದರಿಂದ ಸಂಘವು ಮತ್ತಷ್ಟು ಸದೃಢವಾಗಿ ಉಪನ್ಯಾಸಕರ ಹಿತಾಸಕ್ತಿಯನ್ನು ಕಾಯುವ ನಿಟ್ಟಿನಲ್ಲಿ ಹೋರಾಡಲು ಸಾಧ್ಯವಾಗುತ್ತದೆ.

**ತಮ್ಮ ನಂಬುಗೆಯ**

**ಅಧ್ಯಕ್ಷರು**

**ಮತ್ತು ಪದಾಧಿಕಾರಿಗಳು**

# ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ (ರಿ) ಬೆಂಗಳೂರು

## ಪದಾಧಿಕಾರಿಗಳ ಪಟ್ಟಿ

ಅಧ್ಯಕ್ಷರು
ಶ್ರೀ ಎ.ಹೆಚ್.ನಿಂಗೇಗೌಡ

ಕಾರ್ಯಾಧ್ಯಕ್ಷರು
ಶ್ರೀ ಎಸ್.ಆರ್.ವೆಂಕಟೇಶ್

ಪ್ರಧಾನ ಕಾರ್ಯದರ್ಶಿ
ಶ್ರೀ ಶಿವರಾವ್ ಬಿ ಮಾಲಿಪಾಟೀಲ್

ಕೋಶಾಧ್ಯಕ್ಷರು
ಶ್ರೀ ಜಯಣ್ಣ.ಎಂ

ಗೌರವಾಧ್ಯಕ್ಷರು
ಶ್ರೀ ತಿಮ್ಮಯ್ಯ ಪುರ್ಲೆ

## ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರು

ಶ್ರೀ ಸುರೇಶ್.ಹೆಚ್.ಟಿ, ಹಾಸನ

ಶ್ರೀ ಹನುಮಂತಯ್ಯ, ಮಂಡ್ಯ

ಶ್ರೀ ಶ್ರೀಶೈಲ.ಹೆಚ್.ಬೀರಕಬ್ಬಿ, ಗದಗ

ಶ್ರೀ ಪಾಲಾಕ್ಷಿ.ಬಿ, ದಾವಣಗೆರೆ

ಶ್ರೀ ನರಸಪ್ಪ ಬಂಡಾರಿ, ರಾಯಚೂರು

## ವಿಶೇಷ ಆಹ್ವಾನಿತ ಕಾರ್ಯಕಾರಿ ಸಮಿತಿ ಸದಸ್ಯರು

ಶ್ರೀ ಆರ್.ಜಿ.ಮಠ, ಬೆಳಗಾವಿ

ಶ್ರೀ ಎಸ್.ಎಸ್.ನಿಸ್ಸೀಮಗೌಡ್ರು, ಹಾವೇರಿ

ಉಪಾಧ್ಯಕ್ಷರುಗಳು, ಸಂಘಟನಾ ಕಾರ್ಯದರ್ಶಿಗಳು,
ಕಾರ್ಯದರ್ಶಿಗಳು, ಸಹ ಕಾರ್ಯದರ್ಶಿಗಳು,

ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕುಗಳ ಅಧ್ಯಕ್ಷರು
ಹಾಗೂ ಪದಾಧಿಕಾರಿಗಳು

R.H.Channabasappa
B.A.,B.Com.,F.C.A.,
Chartered Accountant

Office: No.119, 4th Cross, 19th Main,
1st 'N' Block, Rajajinagar, Bangalore-10.

# AUDIT REPORT

We have complied the information as furnished by **"KARNATAKA RAJYA PADHAVIPOORVA COLLEGUGALA UPANYASAKARA SANGHA, No.DB-102, PWD Qtrs., Kavalbyrasandra, R.T.Nagar, Bangalore-560 032"** and drawn the following financial statements: -

1. Receipts & Payment Accounts for the year ended 31.03.2023.
2. Income & Expenditure Account for the year ended 31.03.2023.
3. Balance sheet as on 31.03.2023.

R.H CHANNABASAPPA
Chartered Accountant

R.H CHANNABASAPPA M.NO. 016330 Chartered Accountant

## KARNATAKA RAJYA PADHAVIPOORVA COLLEGUGALA UPANYASAKARA SANGHA

**No.DB-102, PWD Qtrs., Kavalbyrasandra, R.T.Nagar, Bangalore-560 032.**

### RECEIPTS AND PAYMENTS ACCOUNT FOR THE PERIOD ENDED 31-03-2023

| | | | | | |
|---|---|---|---|---|---|
| To | Opening Balance | 23,634.00 | By | Local Conveyance | 2,412.00 |
| | Receipts | 22,100.00 | | Meeting Expenses | 5,537.00 |
| | | | | Local Conveyance | 3,591.00 |
| | | | | Printing & Stationery | 2,273.00 |
| | | | | Postage charges | 2,271.00 |
| | | | | Misc.Expenses | 4,310.00 |
| | | | By | Closing Balance | 25,340.00 |
| | | 45,734.00 | | | 45,734.00 |

### INCOME AND EXPENDITURE ACCOUNT FOR THE PERIOD ENDED 31-03-2023

| | | | | | |
|---|---|---|---|---|---|
| To | Local Conveyance | 2,412.00 | By | Receipts | 22,100.00 |
| | Meeting Expenses | 5,537.00 | | | |
| | Local Conveyance | 3,591.00 | | | |
| | Printing & Stationery | 2,273.00 | | | |
| | Postage charges | 2,271.00 | | | |
| | Misc.Expenses | 4,310.00 | | | |
| To | Excess of Income over Exp. | 1,706.00 | | | |
| | | 22,100.00 | | | 22,100.00 |

Compiled as per information Provided.

Channabasappa

R.H CHANNABASAPPA
Chartered Accountant

R.H. CHANNABASAPPA M.NO. 016330 Chartered Accountant

## KARNATAKA RAJYA PADHAVIPOORVA COLLEGUGALA UPANYASAKARA SANGHA

**No.DB-102, PWD Qtrs., Kavalbyrasandra, R.T.Nagar, Bangalore-560 032.**

### RECEIPTS AND PAYMENTS ACCOUNT FOR THE PERIOD ENDED 31-03-2024

| | | | | | |
|---|---|---|---|---|---|
| To | Opening Balance | 23,634.00 | By | Local Conveyance | 2,484.00 |
| | Receipts | 42,500.00 | | Meeting Expenses | 5,703.00 |
| | | | | Local Conveyance | 3,699.00 |
| | | | | Printing & Stationery | 2,341.00 |
| | | | | Postage charges | 2,339.00 |
| | | | | Misc.Expenses | 4,439.00 |
| | | | By | Closing Balance | 45,129.00 |
| | | 66,134.00 | | | 66,134.00 |

### INCOME AND EXPENDITURE ACCOUNT FOR THE PERIOD ENDED 31-03-2024

| | | | | | |
|---|---|---|---|---|---|
| To | Local Conveyance | 2,484.00 | By | Receipts | 42,500.00 |
| | Meeting Expenses | 5,703.00 | | | |
| | Local Conveyance | 3,699.00 | | | |
| | Printing & Stationery | 2,341.00 | | | |
| | Postage charges | 2,339.00 | | | |
| | Misc.Expenses | 4,439.00 | | | |
| To | Excess of Income over Exp. | 21,495.00 | | | |
| | | 42,500.00 | | | 42,500.00 |

Compiled as per information Provided.

Channabasappa
R.H CHANNABASAPPA
Chartered Accountant
R.H CHANNABASAPPA M.No. 016330 Chartered Accountant

**KARNATAKA RAJYA PADHAVIPOORVA COLLEGUGALA UPANYASAKARA SANGHA**

**No.DB-102, PWD Qtrs., Kavalbyrasandra, R.T.Nagar, Bangalore-560 032.**

**BALANCE SHEET AS AT 31-03-2023**

| LIABILITIES | | | ASSETS | |
|---|---|---|---|---|
| General Fund | 23,634.00 | | | |
| Add: Excess of Income | | | Closing Balance | 25,340.00 |
| Over Exp. | 1,706.00 | 25,340.00 | | |
| | | 25,340.00 | | 25,340.00 |

Compiled as per information Provided.

R.H CHANNABASAPPA
Chartered Accountant
M.NO. 016330

## KARNATAKA RAJYA PADHAVIPOORVA COLLEGUGALA UPANYASAKARA SANGHA

**No.DB-102, PWD Qtrs., Kavalbyrasandra, R.T.Nagar, Bangalore-560 032.**

**BALANCE SHEET AS AT 31-03-2024**

| LIABILITIES | | | ASSETS | |
|---|---|---|---|---|
| General Fund | 23,634.00 | | | |
| Add: Excess of Income | | | Closing Balance | 45,129.00 |
| Over Exp. | 21,495.00 | 45,129.00 | | |
| | | 45,129.00 | | 45,129.00 |

Compiled as per information Provided.

R.H CHANNABASAPPA
Chartered Accountant

R.H. CHANNABASAPPA M.NO. 016330 Chartered Accountant